ನಿಮ್ಮೊಡನೆ

# ಮುರಿದು ಕಟ್ಟುವ ಕಾಲ?

ಕೊರೊನಾ ಕಾರಣದಿಂದ ಆರ್ಥಿಕತೆಗೆ ಆಗಿರುವ ಏಟು ಮತ್ತು ಅದರ ಪರಿಣಾಮವಾಗಿ ಜನ ಎದುರಿಸುತ್ತಿರುವ ಸಂಕಷ್ಟಗಳು ಜನಸಾಮಾನ್ಯರ ಗ್ರಹಿಕೆಗೆ ನಿಲುಕಿರುವುದಕ್ಕಿಂತ ಹಲವು ಪಟ್ಟು ಹೆಚ್ಚು ಎಂಬ ಕಹಿಸತ್ಯಗಳು ಒಂದೊಂದಾಗಿ ಹೊರಬರುತ್ತಿವೆ. ಬಡವರು, ಉಳ್ಳವರು, ನಗರವಾಸಿಗಳು, ಗ್ರಾಮೀಣವಾಸಿಗಳು ಎಂಬ ಭೇದವಿಲ್ಲದೆ ಎಲ್ಲರಿಗೂ ಅದರ ಬಿಸಿ ತಟ್ಟಿದೆಯಾದರೂ ತೀವ್ರತೆಯಲ್ಲಿ ವ್ಯತ್ಯಾಸಗಳಿವೆ. ಲಾಕ್‌ಡೌನ್‌ನಿಂದ ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳೇ ಹೆಚ್ಚು ತಲ್ಲಣಕ್ಕೆ ಒಳಗಾದವು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಲಾಕ್‌ಡೌನ್ ಎಂಬುದು ಕೊರೊನಾ ವಿರುದ್ಧದ ಹೋರಾಟಕ್ಕೆ ಆರೋಗ್ಯ ಸೇವೆಗಳ ನೆಲೆಯಲ್ಲಿ ಒಂದಿಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಲು ಸಿಗುವ ಅವಕಾಶ ಮಾತ್ರ ಎಂದು ನೀತಿ ನಿರೂಪಕರು ಹಲವಾರು ಸಲ ಹೇಳಿದ್ದಾರೆ. ಅವರ ಮಾತಿನಲ್ಲಿ ಹುಳುಕು ಹುಡುಕುವಂತಹುದು ಏನೂ ಇಲ್ಲ ಮತ್ತು ಅದು ಅನಿವಾರ್ಯವೂ ಆಗಿತ್ತು. ಆದರೆ ಪರಿಣಾಮ? ಲಾಕ್‌ಡೌನ್‌ನಿಂದ ಮುಕ್ಕಾಲು ಪಾಲು ಕುಟುಂಬಗಳು ಆದಾಯ ಖೋತಾ ಎದುರಿಸಿವೆ ಎಂದು ಸಮೀಕ್ಷೆಯೊಂದು ತಿಳಿಸಿರುವುದು ಪರಿಣಾಮದ ತೀವ್ರತೆಯನ್ನು ಸಾರುತ್ತದೆ.

ಆದಾಯದ ಮೂಲಗಳು ಬತ್ತಿದಾಗ, ಉದ್ಯೋಗ ನಷ್ಟ ಉಂಟಾದಾಗ ದೈನಂದಿನ ಜೀವನ ನಿರ್ವಹಣೆಗೆ ‘ಹುಂಡಿ’ಗೆ ಕೈ ಹಾಕಲೇಬೇಕಾಗುತ್ತದೆ. ಕಾಸಿಗೆ ಕಾಸು ಕೂಡಿಸಿ ಇಟ್ಟಂತಹ ಉಳಿತಾಯದ ಹುಂಡಿ ಅದು. ಈಗ ಅದು ಕೂಡ ಕರಗತೊಡಗಿದೆ. ಸುಮಾರು 14 ಕೋಟಿ, ಅಂದರೆ ಶೇಕಡ 30ರಷ್ಟು ನಗರವಾಸಿಗಳ ಉಳಿತಾಯವು ಈ ತಿಂಗಳ ಅಂತ್ಯಕ್ಕೆ ಬರಿದಾಗಲಿದೆ. ಆ ಬಳಿಕ ಜೀವನವಶ್ಯಕ ವಸ್ತುಗಳನ್ನು ಹೊಂದಿಸಿಕೊಳ್ಳುವುದು ಸಹ ಕಷ್ಟವಾಗಬಹುದು ಎಂದು ಸಮೀಕ್ಷೆಯೊಂದು ಅಂದಾಜಿಸಿರುವುದು ನಮ್ಮ ಸರ್ಕಾರಗಳ ಕಣ್ಣು ತೆರೆಸಬೇಕಿದೆ.

ಈ ಮಹಾ ಬಿಕ್ಕಟ್ಟಿನ ಉಪಶಮನಕ್ಕಾಗಿ ಕೇಂದ್ರ ಸರ್ಕಾರವು ಆರ್ಥಿಕ ಉತ್ತೇಜನಾ ಪ್ಯಾಕೇಜ್ ಪ್ರಕಟಿಸಿದೆ. ರಾಜ್ಯ ಸರ್ಕಾರ ಕೂಡ ಬೇರೆ ಬೇರೆ ವಲಯಗಳಿಗೆ ಪ್ರತ್ಯೇಕ ಪ್ಯಾಕೇಜ್ ಘೋಷಿಸಿದೆ. ಆದರೆ, ಈ ಉಪಕ್ರಮಗಳು ಏನೇನೂ ಸಾಲವು ಎಂಬುದು ಸಂಕಷ್ಟಗಳ ತೀವ್ರತೆ ಅರಿತವರಿಗೆ ಗೊತ್ತಾಗುತ್ತದೆ. ಸಾಮಾಜಿಕ ಭದ್ರತಾ ವ್ಯವಸ್ಥೆ ಎಂಬುದು ನಮ್ಮಲ್ಲಿ ಬಹುದುರ್ಬಲ. ಬಿಕ್ಕಟ್ಟಿನ ಪರಿಣಾಮವನ್ನು ಕಡಿಮೆ ಮಾಡಬೇಕಿದ್ದರೆ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಬಲಪಡಿಸುವುದು ಅಗತ್ಯ. ಮಾರ್ಗೋಪಾಯಗಳ ಬಗೆಗೆ ಗಂಭೀರವಾಗಿ ಚಿಂತಿಸಿ, ತುರ್ತಾಗಿ ಸ್ಪಂದಿಸಬೇಕಾಗಿದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು, ಅದರ ಅಡಿಯಲ್ಲಿ ವಿತರಣೆ ಮಾಡುವ ವಸ್ತು–ಧಾನ್ಯಗಳ ಪ್ರಮಾಣವನ್ನು ದ್ವಿಗುಣಗೊಳಿಸಬೇಕು ಎಂಬ ಒತ್ತಾಯ ಇದೆ. ಈ ದಿಸೆಯಲ್ಲೂ ಗಂಭೀರವಾಗಿ ಯೋಚಿಸಬೇಕಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರೆ ಹಳ್ಳಿಗಾಡಿನ ದುಡಿಯುವ ಕೈಗಳಿಗೆ ಕೆಲಸ ಕೊಡಬಹುದು. ಆದರೆ, ನಗರವಾಸಿಗಳಿಗೆ ಅಂತಹದೊಂದು ಯೋಜನೆಯ ಆಸರೆಯೂ ಇಲ್ಲ. ಅದನ್ನು ನಗರ ಪ್ರದೇಶಗಳಿಗೂ ವಿಸ್ತರಿಸುವ ನೆಲೆಯಲ್ಲಿ ಯೋಚಿಸಲು ಇದು ಸಕಾಲ. ಕಾರ್ಮಿಕ ಕುಟುಂಬಗಳಿಗೆ ಜೀವನೋಪಾಯಕ್ಕೆ ಅನುವಾಗುವಂತೆ ಒಂದು ನಿರ್ದಿಷ್ಟ ಅವಧಿಗೆ ಪ್ರತೀ ತಿಂಗಳು ಇಂತಿಷ್ಟು ಅಂತ ಹಣಕಾಸಿನ ಪರಿಹಾರ ದೊರಕಿಸಿಕೊಡುವುದರ ಸಾಧಕ–ಬಾಧಕ ಕುರಿತೂ ಚಿಂತಿಸಬೇಕು.

ಕೇಂದ್ರ ಸರ್ಕಾರವು ವಿಸ್ತೃತ ನೆಲೆಯಲ್ಲಿ ಕಾರ್ಯತಂತ್ರಗಳನ್ನು ಪ್ರಕಟಿಸಬಹುದು. ಆದರೆ, ರಾಜ್ಯಗಳು ಸ್ಥಳೀಯವಾಗಿ ಕಾರ್ಯಸಾಧು ಎನ್ನಿಸುವ ನೀತಿ, ಕ್ರಿಯಾ ಯೋಜನೆಗಳನ್ನು ರೂಪಿಸಿಕೊಳ್ಳುವುದು ಸೂಕ್ತ. ಈ ದಿಸೆಯಲ್ಲಿ ಸ್ಥಳೀಯ ಆಡಳಿತಗಳ ಜವಾಬ್ದಾರಿ ಕೂಡ ಹೆಚ್ಚು. ಅವುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ ಅನುಷ್ಠಾನ ಸುಲಭ. ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ಅವಧಿ ಪೂರ್ಣಗೊಂಡಿದೆ. ಕೊರೊನಾ ಬಿಕ್ಕಟ್ಟಿನ ಕಾರಣದಿಂದ ಚುನಾವಣೆ ಮುಂದಕ್ಕೆ ಹೋಗಿದೆ. ಆಡಳಿತಾಧಿಕಾರಿಗಳ ನೇಮಕದ ಆಜ್ಞೆ ಹೊರಬಿದ್ದಿದೆ. ‘ಗ್ರಾಮಸಭೆ’ಯ ಸ್ಥಾನವನ್ನು ಅಧಿಕಾರಿಗಳು ತುಂಬಲಾರರು. ಗ್ರಾಮ ಆಡಳಿತಕ್ಕೆ ಆ ಮಟ್ಟಿಗೆ ತೊಡಕು ಆಗಿದೆಯಾದರೂ ಅದು ಜನರಿಗೆ ತಟ್ಟದಂತೆ ನೋಡಿಕೊಳ್ಳುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ.

ಅದೃಶ್ಯ ವೈರಾಣುವೊಂದು ನಮ್ಮ ದೈನಂದಿನ ಜೀವನಕ್ರಮ, ವೈದ್ಯಕೀಯ ವ್ಯವಸ್ಥೆ, ಗಳಿಕೆಯ ತಳಹದಿ, ಚಿಂತನಾ ಕ್ರಮ, ಸಂಬಂಧಗಳು... ಎಲ್ಲವನ್ನೂ ಬುಡಮೇಲು ಮಾಡಿದೆ. ಕೆಲವನ್ನು ಪೂರ್ತಿ ಮುರಿದು, ಹೊಸದಾಗಿ ಕಟ್ಟಬೇಕಾದ ಸ್ಥಿತಿಗೆ ದೂಡಿದೆ. ತಲೆತಲಾಂತರದಿಂದ ರೂಢಿಸಿಕೊಂಡು ಬಂದಿದ್ದ ಮಾದರಿಗಳನ್ನು ಬದಲಿಸಿ ಹೊಸ ಶಕೆಗೆ ಕಾಲಿರಿಸುವ ಪ್ರಕ್ರಿಯೆ ಅಷ್ಟು ಸುಲಭವಾಗಿ ಆಗುವಂತಹುದಲ್ಲ. ಎಲ್ಲರೂ ಕೈಜೋಡಿಸಿದಾಗ ಮಾತ್ರ ಅದನ್ನು ತುಸು ಸುಲಲಿತಗೊಳಿಸಬಹುದು. ಅದು, ಒಂದಷ್ಟು ಸಂಯಮ ಮತ್ತು ಬದ್ಧತೆಯನ್ನು ಬಯಸುತ್ತದೆ.

■ ಎನ್. ಉದಯಕುಮಾರ್

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರೆ ಹಳ್ಳಿಗಾಡಿನ ದುಡಿಯುವ ಕೈಗಳಿಗೆ ಕೆಲಸ ಕೊಡಬಹುದು. ಆದರೆ, ನಗರವಾಸಿಗಳಿಗೆ ಅಂತಹದೊಂದು ಯೋಜನೆಯ ಆಸರೆಯೂ ಇಲ್ಲ. ಅದನ್ನು ನಗರ ಪ್ರದೇಶಗಳಿಗೂ ವಿಸ್ತರಿಸುವ ನೆಲೆಯಲ್ಲಿ ಯೋಚಿಸಲು ಇದು ಸಕಾಲ.



ಈಶ್ವರ್